ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್
ಆಫ್ ಪೊಲೀಸ್‌ರವರ ಕಾರ್ಯಾಲಯ,
ಕರ್ನಾಟಕ ರಾಜ್ಯ, ನೃಪತುಂಗ ರಸ್ತೆ,
ಬೆಂಗಳೂರು - 560 001

ಸಂ: ಕಾ&ಸು/ಮಿಶ್ರ/99/2026.

ಮಹಾನಿರ್ದೇಶಕರು ಹಾಗೂ,
ಪೊಲೀಸ್ ಮಹಾನಿರೀಕ್ಷಕರವರ ಕಛೇರಿ,
ಕರ್ನಾಟಕ ರಾಜ್ಯ, ಬೆಂಗಳೂರು.
ದಿನಾಂಕ: 15.06.2026.

# ಸ್ಥಾಯಿ ಆದೇಶ – 1061

ವಿಷಯ: ಒಬ್ಬ ವ್ಯಕ್ತಿಯ ಅನುಮತಿಯಿಲ್ಲದೆ ಆತನ/ಆಕೆಯ ಖಾಸಗಿ/ಆಪ್ತ ಚಿತ್ರಗಳು ಮತ್ತು ವೀಡಿಯೊಗಳನ್ನು ಪ್ರಕಟಿಸುವುದು ಅಥವಾ ಪ್ರಸಾರ ಮಾಡುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಪೊಲೀಸ್ ಅಧಿಕಾರಿಗಳು ಅನುಸರಿಸಬೇಕಾದ ಕ್ರಮಗಳ ಕುರಿತು ಮಾರ್ಗಸೂಚಿಗಳು

* * *

ಯಾವುದೇ ವ್ಯಕ್ತಿಯ ಖಾಸಗಿ/ಆಪ್ತ ಚಿತ್ರಗಳು ಹಾಗೂ ವೀಡಿಯೊಗಳನ್ನು ಅವರ ಅನುಮತಿಯಿಲ್ಲದೆ ಪ್ರಕಟಿಸುವುದು ಅಥವಾ ಪ್ರಸಾರ ಮಾಡುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಲ್ಲಿಸಲಾಗುವ ದೂರುಗಳನ್ನು ದಾಖಲಿಸುವಲ್ಲಿ ಕೆಲವೆಡೆ ನಿರಾಕರಣೆ ಮಾಡುತ್ತಿರುವುದು ಅಥವಾ ವಿಳಂಬವಾಗಿ ದಾಖಲಿಸುತ್ತಿರುವುದು ಗಮನಕ್ಕೆ ಬಂದಿದೆ. ಕೆಲವೊಮ್ಮೆ, ಸಂತ್ರಸ್ತರು ಮೊದಲು ಆ ಚಿತ್ರ/ವೀಡಿಯೊಗಳನ್ನು ಚಿತ್ರೀಕರಿಸಲು ಒಪ್ಪಿಗೆ ನೀಡಿದ್ದರು ಎಂಬ ಕಾರಣದ ಆಧಾರದ ಮೇಲೆ ದೂರು ಸ್ವೀಕರಿಸದಿರುವುದು ಕಂಡುಬಂದಿದೆ. ಆದರೆ, ನಿಯಮಾನುಸಾರ, ಚಿತ್ರೀಕರಣಕ್ಕೆ ನೀಡಿದ ಒಪ್ಪಿಗೆಗೂ (consent to capture) ಮತ್ತು ಇತರರಿಗೆ ಹಂಚಿಕೆ/ಪ್ರಸಾರಕ್ಕೆ ನೀಡುವ ಒಪ್ಪಿಗೆಗೂ (consent to dissemination) ವ್ಯತ್ಯಾಸವಿದೆ. ಮೊದಲನೆಯದಕ್ಕೆ ಒಪ್ಪಿಗೆ ಇದ್ದರೂ, ನಂತರದ ಹಂಚಿಕೆಗೆ ಒಪ್ಪಿಗೆ ಇಲ್ಲದಿದ್ದರೂ ಪ್ರಚಾರಪಡಿಸಿರೆ, ಅದು ಸಂಜ್ಞೇಯ (cognizable) ಅಪರಾಧವಾಗುತ್ತದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯವು Justice K. S. Puttaswamy (Retd.) v. Union of India, (2017) 10 SCC 1 ತೀರ್ಪಿನಲ್ಲಿ ಗೌಪ್ಯತೆಯ ಹಕ್ಕು (Right to Privacy) — ದೇಹದ ಗೌಪ್ಯತೆ, ಮಾಹಿತಿಯ ಗೌಪ್ಯತೆ ಮತ್ತು ವೈಯಕ್ತಿಕ ಮಾಹಿತಿಯ ಪ್ರಸಾರವನ್ನು ನಿಯಂತ್ರಿಸುವ ಹಕ್ಕು — ಇವುಗಳನ್ನು ಭಾರತ ಸಂವಿಧಾನದ ವಿಧಿ 21 ಅಡಿಯಲ್ಲಿ ಮೂಲಭೂತ ಹಕ್ಕು ಎಂದು ಮಾನ್ಯತೆ ನೀಡಿದೆ.

ಈ ಹಕ್ಕಿನ ರಕ್ಷಣೆಯ ಉದ್ದೇಶದಿಂದ ಕೆಳಕಂಡ ವಿಧಿಗಳನ್ನು ಅಳವಡಿಸಿ, ದೂರು ಹಾಗೂ ಎಫ್‌ಐಆರ್ ನೋಂದಣಿ ಮಾಡಬೇಕಾಗುತ್ತದೆ. ಹಾಗೆಯೇ, ದೂರಿನಲ್ಲಿ ಸ್ಪಷ್ಟವಾಗಿ ಉಲ್ಲೇಖಿಸದಿದ್ದರೂ

ಸಹ ಪ್ರಕರಣದ ವಾಸ್ತವಾಂಶಗಳಿಂದ ಅಂತಹ ಅಪರಾಧಗಳ ಅನ್ವಯ ಸಾಧ್ಯತೆ ಕಂಡುಬಂದಲ್ಲಿ, ಅವುಗಳನ್ನು ಸಹ ಎಫ್‌ಐಆರ್‌ನಲ್ಲಿ ಒಳಪಡಿಸುವುದು ಸೂಕ್ತ.

ಕರ್ನಾಟಕ ರಾಜ್ಯದಾದ್ಯಂತ ಏಕರೂಪತೆ ಹಾಗೂ ಕಟ್ಟುನಿಟ್ಟಿನ ಅನುಷ್ಠಾನ ಖಚಿತಪಡಿಸಲು ಕೆಳಕಂಡ ನಿರ್ದೇಶನಗಳನ್ನು ಹೊರಡಿಸಲಾಗಿದೆ:

**1. ಒಪ್ಪಿಗೆಯ ಕುರಿತು ಕಾನೂನುಸ್ಥಿತಿ:**

ಎಲ್ಲಾ ಅಧಿಕಾರಿಗಳು ಗಮನಿಸಬೇಕಾದ ವಿಷಯವೆಂದರೆ, ಚಿತ್ರೀಕರಣಕ್ಕೆ ನೀಡಿದ ಒಪ್ಪಿಗೆ ಎಂದರೆ ಪ್ರಸಾರಕ್ಕೆ ನೀಡಿದ ಒಪ್ಪಿಗೆ ಅಲ್ಲ. ಭಾರತೀಯ ನ್ಯಾಯ ಸಂಹಿತೆ, 2023ರ ಸೆಕ್ಷನ್ 77ರ ವಿವರಣೆ 2 ಪ್ರಕಾರ, ಪೀಡಿತರು ಚಿತ್ರ/ವೀಡಿಯೊ ಸೆರೆಹಿಡಿಯಲು ಒಪ್ಪಿಗೆ ನೀಡಿದ್ದರೂ, ಮೂರನೇ ವ್ಯಕ್ತಿಗಳಿಗೆ ಹಂಚಲು ಒಪ್ಪಿಗೆ ನೀಡದಿದ್ದಲ್ಲಿ ಮತ್ತು ಆ ಚಿತ್ರ/ವೀಡಿಯೊ ಹಂಚಿಕೆಯಾಗಿದ್ದರೆ, ಅದು ಅಪರಾಧವಾಗುತ್ತದೆ.

ಮಾಹಿತಿ ತಂತ್ರಜ್ಞಾನ ಕಾಯ್ದೆ, 2000ರ ಸೆಕ್ಷನ್ 66(ಇ), 67 ಮತ್ತು 67(ಎ) ಗಳು ಲಿಂಗತಟಸ್ಥ (gender-neutral)ವಾಗಿದ್ದು, ಚಿತ್ರೀಕರಣಕ್ಕೆ ಪೂರ್ವಾನುಮತಿ ಇದ್ದದ್ದೇ ಆದರೂ ಅನುಮತಿಯಿಲ್ಲದ ಪ್ರಸಾರವೇ ಮುಖ್ಯ ಅಪರಾಧ ಅಂಶವಾಗಿರುತ್ತದೆ.

**2. ಅಳವಡಿಸಬೇಕಾದ ಕಾನೂನು ವಿಧಿಗಳು: ಸೂಚನೆಗಾಗಿ ಸಂಬಂಧಿತ ವಿಧಿಗಳು ಕೆಳಕಂಡಂತಿವೆ:**

**(ಅ) ಭಾರತೀಯ ನ್ಯಾಯ ಸಂಹಿತೆ, 2023ರ ಸೆಕ್ಷನ್ 77 (Voyeurism):**

ಒಬ್ಬ ಮಹಿಳೆ ಖಾಸಗಿ ಕ್ರಿಯೆಯಲ್ಲಿ ತೊಡಗಿರುವಾಗ, ಸಾಮಾನ್ಯವಾಗಿ ಯಾರೂ ನೋಡಬಾರದೆಂಬ ನಿರೀಕ್ಷೆಯ ಪರಿಸ್ಥಿತಿಯಲ್ಲಿ, ಆಕೆಯನ್ನು ನೋಡುವುದು, ಚಿತ್ರ ಸೆರೆಹಿಡಿಯುವುದು ಅಥವಾ ಅಂತಹ ಚಿತ್ರಗಳನ್ನು ಪ್ರಸಾರ ಮಾಡುವುದು ಅಪರಾಧವಾಗುತ್ತದೆ. ಮೊದಲ ಅಪರಾಧಕ್ಕೆ: 1 ರಿಂದ 3 ವರ್ಷಗಳವರೆಗೆ ಕಾರಾಗೃಹ ಶಿಕ್ಷೆ ಹಾಗೂ ದಂಡ, ಎರಡನೇ ಅಥವಾ ನಂತರದ ಅಪರಾಧಕ್ಕೆ: 3 ರಿಂದ 7 ವರ್ಷಗಳವರೆಗೆ ಕಾರಾಗೃಹ ಶಿಕ್ಷೆ ಹಾಗೂ ದಂಡ. ವಿವರಣೆ 2 ಪ್ರಕಾರ, ಚಿತ್ರೀಕರಣಕ್ಕೆ ಒಪ್ಪಿಗೆ ಇದ್ದರೂ, ಅನುಮತಿಯಿಲ್ಲದ ಪ್ರಸಾರ ಅಪರಾಧವಾಗುತ್ತದೆ. (ಈ ವಿಧಿ ಮಹಿಳಾ ಸಂತ್ರಸ್ತರಿಗೆ ಮಾತ್ರ ಅನ್ವಯಿಸುತ್ತದೆ.)

3

**(ಆ) ಐಟಿ ಕಾಯ್ದೆ, 2000ರ ಸೆಕ್ಷನ್ 66ಇ (Violation of Privacy):**

ಯಾವುದೇ ವ್ಯಕ್ತಿಯ ಖಾಸಗಿ ಅಂಗಗಳ ಚಿತ್ರವನ್ನು ಅವರ ಅನುಮತಿಯಿಲ್ಲದೆ ಸೆರೆಹಿಡಿಯುವುದು, ಪ್ರಕಟಿಸುವುದು ಅಥವಾ ಪ್ರಸಾರ ಮಾಡುವುದು, ಗೌಪ್ಯತೆಯನ್ನು ಉಲ್ಲಂಘಿಸುವ ಸಂದರ್ಭಗಳಲ್ಲಿ ನಡೆದರೆ, ಅದು ಅಪರಾಧ. ಶಿಕ್ಷೆ: ಗರಿಷ್ಠ 3 ವರ್ಷಗಳವರೆಗೆ ಕಾರಾಗೃಹ ಶಿಕ್ಷೆ ಅಥವಾ ₹2 ಲಕ್ಷದವರೆಗೆ ದಂಡ ಅಥವಾ ಎರಡೂ. "ಖಾಸಗಿ ಅಂಗ" ಎಂದರೆ: ನಗ್ನ ಅಥವಾ ಒಳಉಡುಪು ಮುಚ್ಚಿರುವ ಜನನಾಂಗ, ಪ್ಯೂಬಿಕ್ ಭಾಗ, ಹಿಂಭಾಗ (buttock) ಅಥವಾ ಮಹಿಳೆಯ ಸ್ತನಭಾಗ.

**(ಇ) ಐಟಿ ಕಾಯ್ದೆ, 2000ರ ಸೆಕ್ಷನ್ 67 (ಅಶ್ಲೀಲ ವಿಷಯ):**

ಇಲೆಕ್ಟ್ರಾನಿಕ್ ರೂಪದಲ್ಲಿ ಅಶ್ಲೀಲ, ಕಾಮೋದ್ದೀಪಕ (lascivioμ) ಅಥವಾ ಕಾಮಪ್ರಚೋದಕ ವಿಷಯವನ್ನು ಪ್ರಕಟಿಸುವುದು ಅಥವಾ ಪ್ರಸಾರ ಮಾಡುವುದು ಅಪರಾಧ. ಮೊದಲ ಅಪರಾಧಕ್ಕೆ: ಗರಿಷ್ಠ 3 ವರ್ಷಗಳ ಶಿಕ್ಷೆ ಹಾಗೂ ₹5 ಲಕ್ಷದವರೆಗೆ ದಂಡ. ಪುನರಾವರ್ತಿತ ಅಪರಾಧಕ್ಕೆ: ಗರಿಷ್ಠ 5 ವರ್ಷಗಳ ಶಿಕ್ಷೆ ಹಾಗೂ ₹10 ಲಕ್ಷದವರೆಗೆ ದಂಡ.

**(ಈ) ಐಟಿ ಕಾಯ್ದೆ, 2000ರ ಸೆಕ್ಷನ್ 67(ಎ) (Sexually Explicit Material):**

ಲೈಂಗಿಕ ಕ್ರಿಯೆ ಅಥವಾ ಲೈಂಗಿಕವಾಗಿ ಸ್ಪಷ್ಟ ವಿಷಯ ಹೊಂದಿರುವ ವಸ್ತುಗಳನ್ನು ಇಲೆಕ್ಟ್ರಾನಿಕ್ ರೂಪದಲ್ಲಿ ಪ್ರಕಟಿಸುವುದು ಅಥವಾ ಪ್ರಸಾರ ಮಾಡುವುದು ಅಪರಾಧ. ಮೊದಲ ಅಪರಾಧಕ್ಕೆ: ಗರಿಷ್ಠ 5 ವರ್ಷಗಳ ಶಿಕ್ಷೆ ಹಾಗೂ ₹10 ಲಕ್ಷದವರೆಗೆ ದಂಡ. ಪುನರಾವರ್ತಿತ ಅಪರಾಧಕ್ಕೆ: ಗರಿಷ್ಠ 7 ವರ್ಷಗಳ ಶಿಕ್ಷೆ ಹಾಗೂ ₹10 ಲಕ್ಷದವರೆಗೆ ದಂಡ.

**3. ಎಫ್‌ಐಆರ್ ಕಡ್ಡಾಯ ನೋಂದಣಿ:**

ಅನುಮತಿಯಿಲ್ಲದೆ ಖಾಸಗಿ/ಆಪ್ತ ಚಿತ್ರಗಳು ಅಥವಾ ವೀಡಿಯೊಗಳ ಪ್ರಸಾರ, "ಬ್ಲ್ಯಾಕ್‌ಮೇಲ್ ವೀಡಿಯೊಗಳು", "ಸೆಕ್ಸ್ಟೋರ್ಷನ್", "ರಿವೆಂಜ್ ಪೋರ್ನೋಗ್ರಫಿ" ಮುಂತಾದ ಪ್ರಕರಣಗಳ ಕುರಿತು ದೂರು ಬಂದ ತಕ್ಷಣ ಎಫ್‌ಐಆರ್ ದಾಖಲಿಸಬೇಕು. ಮಹಿಳಾ ಸಂತ್ರಸ್ತರಿದ್ದಲ್ಲಿ ಸೆಕ್ಷನ್ 77 ಬಿಎನ್‌ಎಸ್ ಜೊತೆಗೆ ಐಟಿ ಕಾಯ್ದೆಯ ಸೆಕ್ಷನ್ 66(ಇ), 67 ಮತ್ತು 67 (ಎ) ಹಾಗೂ ಪ್ರಕರಣದ ಸತ್ಯಾಂಶಗಳಿಗೆ ಅನುಗುಣವಾದ ಇತರ ವಿಧಿಗಳನ್ನು ಸೇರಿಸಬೇಕು.

**4. ಪೂರ್ವಾನುಮತಿ ಆಧಾರದಲ್ಲಿ ನಿರಾಕರಣೆ ಮಾಡಕೂಡದು:**

ಪೀಡಿತರು ಮೊದಲು ಚಿತ್ರೀಕರಣಕ್ಕೆ ಒಪ್ಪಿಗೆ ನೀಡಿದ್ದರು ಎಂಬ ಕಾರಣಕ್ಕೆ ಎಫ್‌ಐಆರ್ ನೋಂದಣಿಯನ್ನು ನಿರಾಕರಿಸಕೂಡದು ಅಥವಾ ಮುಂದೂಡಬಾರದು. ಆ ಒಪ್ಪಿಗೆಯು, ನಂತರದ ಅನುಮತಿಯಿಲ್ಲದ ಪ್ರಸಾರಕ್ಕೆ ರಕ್ಷಣೆಯಾಗುವುದಿಲ್ಲ.

**5. ಬ್ಲ್ಯಾಕ್‌ಮೇಲ್ / ಸೆಕ್ಸ್ಟೋರ್ಷನ್:**

ಆಪ್ತ ವಿಷಯಗಳನ್ನು ಬಳಸಿ ಹಣ, ಲೈಂಗಿಕ ಅನುಕೂಲ ಅಥವಾ ಬೇರೆ ಲಾಭಕ್ಕಾಗಿ ಬೆದರಿಕೆ/ಸುಲಿಗೆ ನಡೆಸಿದರೆ, ಬಿಎನ್‌ಎಸ್, 2023ರ ಸುಲಿಗೆ ಮತ್ತು ಕ್ರಿಮಿನಲ್ ಬೆದರಿಕೆ ಸಂಬಂಧಿತ ವಿಧಿಗಳನ್ನು ಐಟಿ ಕಾಯ್ದೆಯ ಜೊತೆಗೆ ಅಳವಡಿಸಿಕೊಳ್ಳತಕ್ಕದ್ದು.

**6. ಜೀರೋ ಎಫ್‌ಐಆರ್:**

ಅಪರಾಧ ಸ್ಥಳೀಯ ವ್ಯಾಪ್ತಿಯ ಹೊರಗೆ ನಡೆದಿದ್ದರೆ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, 2023 ಪ್ರಕಾರ ಜೀರೋ ಎಫ್‌ಐಆರ್ ದಾಖಲಿಸಿ, ತಕ್ಷಣ ಸಂಬಂಧಿತ ಪೊಲೀಸ್ ಠಾಣೆಗೆ ವರ್ಗಾಯಿಸಬೇಕು.

**7. ಕಂಟೆಂಟ್ ಅನ್ನು ತೆಗೆದುಹಾಕುವುದು ಮತ್ತು ಸಾಕ್ಷ್ಯ ಸಂರಕ್ಷಣೆ:**

ಐಟಿ ಕಾಯ್ದೆ ಮತ್ತು ಐಟಿ ನಿಯಮಗಳು, 2021 ಅನ್ವಯ ಸಂಬಂಧಿತ ಸಂಸ್ಥೆಗಳಿಗೆ ನೋಟಿಸ್ ನೀಡಿ, ಅಪರಾಧಕರ ವಿಷಯ (ಛಿಂಟಿಣಜಟಿಣ)ನ್ನು ತೆಗೆದುಹಾಕಲು/ತಡೆಹಿಡಿಯುವ ತ್ವರಿತ ಕ್ರಮ ಕೈಗೊಳ್ಳಬೇಕು. ಎಲ್ಲಾ ಡಿಜಿಟಲ್ ಸಾಕ್ಷ್ಯಗಳನ್ನು ಕಾನೂನುಬದ್ಧವಾಗಿ ಸಂರಕ್ಷಿಸಬೇಕು.

**8. ಪೀಡಿತರ ರಕ್ಷಣೆ:**

ಪೀಡಿತರ ಗುರುತು ಗೌಪ್ಯವಾಗಿರುವಂತೆ ನೋಡಿಕೊಳ್ಳಬೇಕು. ದೂರುದಾರರನ್ನು ಸೂಕ್ಷ್ಮವಾಗಿ ನಡೆಸಿಕೊಳ್ಳುವುದು ಮತ್ತು ಅವರಿಗೆ ಅವಮಾನಕ್ಕೀಡಾಗುವಂತಹ ಯಾವುದೇ ವರ್ತನೆ ತಪ್ಪಿಸಬೇಕು. ಸಾಧ್ಯವಾದಲ್ಲಿ, ಮಹಿಳಾ ಸಂತ್ರಸ್ತೆಯ ದೂರನ್ನು ಮಹಿಳಾ ಅಧಿಕಾರಿಯಿಂದಲೇ ದಾಖಲಿಸಬೇಕು.

**9. ಸೈಬರ್ ಘಟಕಗಳೊಂದಿಗೆ ಸಮನ್ವಯತೆ:**

ತನಿಖಾಧಿಕಾರಿಗಳು ತಾಂತ್ರಿಕ ತನಿಖೆ, ಖಾತೆ ಪತ್ತೆ ಹಾಗೂ ಸಾಧನಗಳ ಫೋರೆನ್ಸಿಕ್ ವಿಶ್ಲೇಷಣೆಗೆ ಸಂಬಂಧಿತ ಸೈಬರ್ ಕ್ರೈಂ ಪೊಲೀಸ್ ಠಾಣೆ ಹಾಗೂ ಸಿಐಡಿ ಸೈಬರ್ ವಿಭಾಗದೊಂದಿಗೆ ಸಮನ್ವಯತೆ ಸಾಧಿಸಬೇಕು.

**10. ಜವಾಬ್ದಾರಿ:**

ಇಂತಹ ಪ್ರಕರಣಗಳಲ್ಲಿ ಎಫ್‌ಐಆರ್ ನೋಂದಣಿ ಮಾಡದಿರುವುದು, ಅಥವಾ "ಪೂರ್ವಾನುಮತಿ" ಎಂಬ ತಪ್ಪು ಕಾರಣದಿಂದ ವಿಳಂಬ ಮಾಡುವುದು ಕಂಡುಬಂದ ಪಕ್ಷದಲ್ಲಿ ಅಂತಹ ಲೋಪಗಳನ್ನು ಗಂಭೀರವಾಗಿ ಪರಿಗಣಿಸಿ ಮತ್ತು ಸಂಬಂಧಿತ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು.

ಎಲ್ಲಾ ಘಟಕಾಧಿಕಾರಿಗಳು ಈ ನಿರ್ದೇಶನಗಳನ್ನು ರಾಜ್ಯದ ಪ್ರತಿಯೊಂದು ಪೊಲೀಸ್ ಠಾಣೆಗೆ ತಲುಪುವಂತೆ ಮಾಡಿ, ಮೇಲಿನ ಎಲ್ಲಾ ನಿರ್ದೇಶನಗಳು ಕಟ್ಟುನಿಟ್ಟಾಗಿ ಅನುಷ್ಠಾನವಾಗುವಂತೆ ಕ್ರಮವಹಿಸಲು ಸೂಚಿಸಿದೆ.

13/6/24

(ಡಾ|| ಎಂ. ಎ. ಸಲೀಂ ಐ.ಪಿ.ಎಸ್)
ಮಹಾನಿರ್ದೇಶಕರು ಹಾಗೂ
ಪೊಲೀಸ್ ಮಹಾನಿರೀಕ್ಷಕರು,
ಕರ್ನಾಟಕ ರಾಜ್ಯ, ಬೆಂಗಳೂರು.

ಗೆ:

1. ಎಲ್ಲಾ ಪೊಲೀಸ್ ಆಯುಕ್ತರು.
2. ಎಲ್ಲಾ ವಲಯದ ಪೊಲೀಸ್ ಮಹಾನಿರೀಕ್ಷಕರು.
3. ಎಲ್ಲಾ ಜಿಲ್ಲೆಗಳ ಪೊಲೀಸ್ ಅಧೀಕ್ಷಕರು.

DGP CONTROL ROOM, BENGALURU
O/o. the DG & IGP, N.T.Road, B'luru-1
Out Messages Received for Transmission
NR No. 911 TH. 1400
Date 16/6/24 Sign.